## ಪ್ರಥಮ ಪಿ.ಯು.ಸಿ ಮಾದರಿ ಪ್ರಶ್ನೆ ಪತ್ರಿಕೆ
## ಮನೋವಿಜ್ಞಾನ(32)

ವಿಷಯ ಸಂಕೇತ: 51

ಸಮಯ : 3–15 ಗಂಟೆಗಳು ಒಟ್ಟು ಅಂಕಗಳು : 100

**I. ಈ ಕೆಳಗಿನ ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. 10 X 1= 10**

1. ಮನೋವಿಜ್ಞಾನದ ಮೊದಲ ನಿರೂಪಣೆ ಬರೆಯಿರಿ.
2. 'ಸೈಕೀ' ಪದದ ಅರ್ಥ ತಿಳಿಸಿ.
3. ಪ್ರಥಮ ಮನೋವಿಜ್ಞಾನ ಪ್ರಯೋಗ ಶಾಲೆಯನ್ನು ಯಾರು ಸ್ಥಾಪಿಸಿದರು.
4. ನರಮಂಡಲದ ಎರಡು ಭಾಗಗಳನ್ನು ಹೆಸರಿಸಿ.
5. ನಾಯಕ ಗ್ರಂಥಿ ಯಾವುದು ?
6. ಪ್ರತಿರೂಪಿಕರಣ ಎಂದರೇನು ?
7. ಇಚ್ಛಾವಧಾನ ಎಂದರೇನು ?
8. ಚಿಂಪಾಜಿಯ ಮೇಲೆ ಪ್ರಯೋಗ ಮಾಡಿದವರು ಯಾರು ?
9. ಪ್ರತಿರೋಧಾತ್ಮಕ ಅಡಚಣೆ ಎಂದರೇನು ?
10. ಸ್ಮೃತಿ ಎಂದರೇನು ?
11. ಅಹಿತಕರ ಸಂವೇಗಕ್ಕೆ ಒಂದು ಉದಾಹರಣೆ ಕೊಡಿ.
12. ಲೈಂಗಿಕ ಪ್ರೇರಣೆಗೆ ಕಾರಣವಾಗಿರುವ ಅಂತ ಸ್ರಾವಗಳು ಯಾವುವು ?
13. ಮಾನಸಿಕ ಬಿಂಬ ಎಂದರೇನು ?
14. ತೀರ್ಮಾನ ಕೈಗೊಳ್ಳುವಿಕೆ ಎಂದರೇನು ?
15. ಪ್ರೌಢವಸ್ಥೆ ಎಂದರೇನು ?

**II. ಕೆಳಗಿನ ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 2 ರಿಂದ 3 ವಾಕ್ಯಗಳಲ್ಲಿ ಉತ್ತರಿಸಿ. 10 X 2 =20**

16. ಮನೋವಿಜ್ಞಾನದ ಆಧುನಿಕ ನಿರೂಪಣೆಯನ್ನು ಬರೆಯಿರಿ.
17. ಸಾಮಾನ್ಯ ಮನೋವಿಜ್ಞಾನದ ಬಗ್ಗೆ ಬರೆಯಿರಿ.
18. ವ್ಯಕ್ತಿ ವೃತ್ತಾಂತ ವಿಧಾನ ಎಂದರೇನು ?
19. ಸ್ವಾಭಾವಿಕ ಮತ್ತು ನಿಯಂತ್ರತ ಅವಲೋಕನದ ನಡುವಿನ ವ್ಯತ್ಯಾಸ ಬರೆಯಿರಿ.
20. ಕೋಶವಿಭಜನೆಯ ಎರಡು ವಿಧಗಳನ್ನು ತಿಳಿಸಿ.
21. ನಿರ್ನಾಳ ಗ್ರಂಥಿ ಎಂದರೇನು ? ಉದಾಹರಣೆ ಕೊಡಿ.
22. ಸಂವೇದನೆಯ ಯಾವುದಾದರೂ ಎರಡು ಲಕ್ಷಣಗಳನ್ನು ತಿಳಿಸಿ.
23. ಭ್ರಮೆ ಎಂದರೇನು ? ಉದಾಹರಣೆ ಕೊಡಿ.
24. ಕಲಿಕೆ ಎಂದರೇನು ?
25. ಕಲಿಕೆಯ ವರ್ಗಾವಣೆ ಎಂದರೇನು ?
26. ಪ್ರಕಟಿತ ವಿಷಯಗಳ ಸ್ಮೃತಿ ಎಂದರೇನು ?
27. ಪ್ರೇರಣೆಯ ವಿಧಗಳನ್ನು ತಿಳಿಸಿ.
28. ಉದ್ವಿಗ್ನತೆ ಬಗ್ಗೆ ಬರೆಯಿರಿ.
29. ವಿವೇಚನೆಯ ವಿಧಗಳನ್ನು ಹೆಸರಿಸಿ.
30. ಪಕ್ವತೆ ಮತ್ತು ವಿಕಾಸದ ನಡುವಿನ ವ್ಯತ್ಯಾಸ ಬರೆಯಿರಿ.

DPUE MQP

**III. ಈ ಕೆಳಗಿನ ಯಾವುದಾದರೂ ಎಂಟು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 15 ರಿಂದ 20 ವಾಕ್ಯಗಳಲ್ಲಿ ಉತ್ತರಿಸಿ. 8 X 5=40**

31. ಕೈಗಾರಿಕಾ ಮತ್ತು ಶೈಕ್ಷಣಿಕ ಮನೋವಿಜ್ಞಾನವನ್ನು ವಿವರಿಸಿ.
32. ಅಂತರಾವಲೋಕನಾ ವಿಧಾನವನ್ನು ಚರ್ಚಿಸಿ.
33. ಥೈರಾಯಿಡ್ ಗ್ರಂಥಿಯ ಕಾರ್ಯಗಳನ್ನು ವಿಶ್ಲೇಷಿಸಿ.
34. ಅವಳಿಗಳು ಎಂದರೇನು ? ಅವಳಿಗಳ ವಿಧಗಳನ್ನು ವಿವರಿಸಿ.
35. ಸಾಂಘಿಕ ಪ್ರೇರಣೆಯನ್ನು ವಿವರಿಸಿ.
36. ವಿವಿಧ ರೀತಿಯ ಕಲಿಕಾ ನ್ಯೂನತೆಗಳ ಬಗ್ಗೆ ಬರೆಯಿರಿ.
37. ಪ್ರಯತ್ನ ದೋಷ ಕಲಿಕಾ ವಿಧಾನವನ್ನು ವಿವರಿಸಿ.
38. ದೀರ್ಘಕಾಲಿಕ ಸ್ಮೃತಿಯ ವಿಧಗಳನ್ನು ವಿವರಿಸಿ.
39. ಜ್ಞಾಪಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಇರುವ ಉಪಯುಕ್ತ (ಮಿತವ್ಯಯ) ವಿಧಾನಗಳನ್ನು ವಿವರಿಸಿ.
40. ಅವಧಾನ ವ್ಯಾಪ್ತಿಯನ್ನು ವಿಶ್ಲೇಷಿಸಿ.
41. ಸೃಜನಾತ್ಮಕ ಚಿಂತಕರ ಲಕ್ಷಣಗಳನ್ನು ಬರೆಯಿರಿ.
42. ಸಮಸ್ಯೆ ಪರಿಹಾರದಲ್ಲಿ ಪ್ರಭಾವ ಬೀರುವ ಅಂಶಗಳನ್ನು ವಿವರಿಸಿ.
43. ಪಿಯಾಜೆಯವರ ಸಂಜ್ಞಾನಾತ್ಮಕ ಬೆಳವಣಿಯ ಹಂತಗಳನ್ನು ವಿವರಿಸಿ.
44. ಬಾಲ್ಯವಸ್ಥೆಯ ಭೌತಿಕ ಬೆಳವಣಿಗೆಯನ್ನು ವಿವರಿಸಿ.

**IV. ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 3 ರಿಂದ 35 ವಾಕ್ಯಗಳಲ್ಲಿ ಉತ್ತರಿಸಿ. 2 X 10= 20**

45. ದೈನಂದಿನ ಬದುಕಿನಲ್ಲಿ ಮನೋವಿಜ್ಞಾನದ ಪ್ರಾಮುಖ್ಯತೆಯನ್ನು ವಿವರಿಸಿ.
46. ನರತಂತುವಿನ ಅಂದವಾದ ಚಿತ್ರ ಬರೆದು ಭಾಗಗಳನ್ನು ಗುರುತಿಸಿ. ಅವುಗಳ ಕಾರ್ಯಗಳನ್ನು ವಿವರಿಸಿ.
47. ಅವಧಾನದ ಮೇಲೆ ಪ್ರಭಾವ ಬೀರುವ ವಸ್ತುಗತ ಹಾಗೂ ವ್ಯಕ್ತಿಗತ ಅಂಶಗಳನ್ನು ವಿವರಿಸಿ.
48. ಸಂವೇಗ ಸ್ಥಿತಿಯಲ್ಲಿ ಉಂಟಾಗುವ ದೈಹಿಕ ಹಾಗೂ ಮಾನಸಿಕ ಬದಲಾವಣೆಗಳನ್ನು ವಿವರಿಸಿ.

**ಪ್ರಾಯೋಗಿಕ ವಿಭಾಗ**

**V. ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ. 2 X 5 =10**

49. ವರದಿಯ ಖಚಿತತೆಯ ಮೇಲೆ ನಿರ್ದೇಶಿತ ಅವಲೋಕನದ ಪರಿಣಾಮವನ್ನು ನಿರ್ಧರಿಸುವ ಪ್ರಯೋಗದಲ್ಲಿ ನೀವು ಅನುಸರಿಸಿದ ಯೋಜನೆ ಮತ್ತು ಪ್ರಯೋಗ ವಿಧಾನವನ್ನು ವಿವರಿಸಿ.
50. ಎರಡು ಸ್ನಾಯುಕ್ರಿಯೆಗಳ ನಡುವೆ ಉಂಟಾಗುವ ಅವಧಾನ ವಿಭಜನೆಯನ್ನು ಅಧ್ಯಯನ ಮಾಡುವ ಪ್ರಯೋಗದಲ್ಲಿ ನೀವು ಅನುಸರಿಸಿದ ಯೋಜನೆ ಮತ್ತು ಪ್ರಯೋಗ ವಿಧಾನವನ್ನು ವಿವರಿಸಿ.
51. ಸಹಚರ್ಯೆಯ ವೇಗದ ಮೇಲೆ ಸಂವೇಗದ ಪರಿಣಾಮವನ್ನು ನಿರ್ಧರಿಸುವ ಪ್ರಯೋಗದಲ್ಲಿ ನೀವು ಅನುಸರಿಸಿದ ಯೋಜನೆ ಮತ್ತು ಪ್ರಯೋಗ ವಿಧಾನವನ್ನು ವಿವರಿಸಿ.

DPUEMQP